ಪುಸ್ತಕಗಳನ್ನು ಕೊಳ್ಳುತ್ತಿದ್ದೆ. ಹೋಮ್ ವರ್ಕ್ ಕೆಲಸಗಳನ್ನು ಸ್ಲೇಟ್‌ಬಳಪಗಳಿಂದ ಮಾಡಿಕೊಳ್ಳುತ್ತಿದ್ದೆ. ನಾನು ಬರೆದುಬರೆದು ಅಭ್ಯಾಸ ಮಾಡುತ್ತಿದ್ದೆ. ಇದಕ್ಕೆ ಸ್ಲೇಟ್‌ಬಳಪ ಉಪಯೋಗಕ್ಕೆ ಬರುತ್ತಿತ್ತು. ನಂತರದಲ್ಲಿ ಅಮ್ಮನಿಗೆ ಬೇರೆ ನೌಕರಿ ಸಿಕ್ಕಾಗ, ಅವರು ಕಚೇರಿಯಿಂದ ತರುತ್ತಿದ್ದ ರದ್ದಿ ಕಾಗದಗಳಿಂದ ನನ್ನ ವರ್ಕ್ ಮಾಡಿಕೊಳ್ಳುತ್ತಿದ್ದೆ. ಅತೀವ ತೊಂದರೆಗಳ ಪರಿಸ್ಥಿತಿಗಳಲ್ಲಿಯೂ ನಾನು ಅಮ್ಮನೊಂದಿಗೆ ಖುಷಿಯಲ್ಲಿದ್ದೆ. ತುಂಬಾ ಸಂತೋಷದ ಸಂಗತಿ ಎಂದರೆ, ಇಲ್ಲಿ ಅಮ್ಮ ಮತ್ತು ಅಪ್ಪನ ನಡುವೆ ಜಗಳಕ್ಕೆ ಅವಕಾಶವಿರಲಿಲ್ಲ. ಆದರೆ ಇಲ್ಲಿ ನನಗೆ ಮನೆ ಮಾಲೀಕನ ಮಗನ ಕಾಟವಿತ್ತು. ಅವನ ಹೆಸರು ಮೋಹನ. ಅವನು ವಯಸ್ಸಿನಲ್ಲಿ ನನಗಿಂತ ಹತ್ತುಹನ್ನೆರಡು ವರ್ಷ ದೊಡ್ಡವನಾಗಿರಬಹುದು. ಅವನು ಆಗಾಗ ನನ್ನನ್ನು ಚುಡಾಯಿಸುತ್ತಿದ್ದ. ನಾನು ನೀರು ತರಲು ಅಂಗಳಕ್ಕೆ ಹೋಗುತ್ತಿದ್ದೆ, ಅಲ್ಲಿ ನಲ್ಲಿಯಿತ್ತು. ಅಲ್ಲಿಂದಲೇ ಎಲ್ಲಾ ಬಾಡಿಗೆದಾರರು ನೀರು ತುಂಬಿಕೊಳ್ಳುತ್ತಿದ್ದರು. ಮೋಹನ ನಾನು ಅಲ್ಲಿಗೆ ಒಂಟಿಯಾಗಿ ಬರುವ ಅವಕಾಶಕ್ಕಾಗಿ ಕಾಯುತ್ತಿದ್ದ. ಮನೆಯ ಮಾಲೀಕ ಉತ್ತಮ ವ್ಯವಸ್ಥೆಯನ್ನು ಮಾಡಿದ್ದ. ನೀರು ಬಂದಾಗ ಸಿಮೆಂಟಿನ ದೊಡ್ಡ ಟ್ಯಾಂಕಿಗೆ ನೀರು ತುಂಬಿಸುತ್ತಿದ್ದ. ಆ ನೀರು ನಾಲ್ಕು ಜನ ಬಾಡಿಗೆದಾರರಿಗೆ ಒಂದು ದಿನಕ್ಕಾಗುತ್ತಿತ್ತು. ತಾಜಾ ನೀರು ಬೇಕಾದವರು, ನಲ್ಲಿಯಲ್ಲಿ ನೀರು ಬರುವ ಸಮಯಕ್ಕೆ ಬಂದು ನೀರು ತುಂಬಿಸಿಕೊಳ್ಳುತ್ತಿದ್ದರು. ಬಾಡಿಗೆದಾರರು ಅಗತ್ಯಕ್ಕೆ ತಕ್ಕಂತೆ ಬಟ್ಟೆ ಮತ್ತು ಪಾತ್ರೆಗಳನ್ನು ತೊಳೆಯಲು ಟ್ಯಾಂಕಿನಿಂದ ನೀರು ತೆಗೆದುಕೊಳ್ಳುತ್ತಿದ್ದರು, ಇದಕ್ಕಾಗಿ ಸರದಿಯನ್ನು ಅನುಸರಿಸಬೇಕಾದ ಅವಶ್ಯಕತೆ ಇರಲಿಲ್ಲ.

ನಾನು ಬಟ್ಟೆಗಳನ್ನು ಸ್ವಚ್ಛ ಮಾಡಲು ಅಲ್ಲಿಗೇ ಹೋಗುತ್ತಿದ್ದೆ. ಟ್ಯಾಂಕಿನಿಂದ ಬಕೆಟ್‌ನಲ್ಲಿ ನೀರು ತುಂಬಿಕೊಂಡು, ಬಟ್ಟೆಗಳನ್ನು ನೆನೆಸಿ, ಸಾಬೂನು ಹಚ್ಚಿ ಬಟ್ಟೆಗಳನ್ನು ಸ್ವಚ್ಛ ಮಾಡುತ್ತಿದ್ದೆ. ನನ್ನ ಈ ಕೆಲಸ ಹೆಚ್ಚು ದಿನ ನಿಶ್ಚಿಂತೆಯಿಂದ ನಡೆಯಲಿಲ್ಲ. ನಾನು ಟ್ಯಾಂಕ್ ಬಳಿಗೆ ಬಂದುಹೋಗುವುದನ್ನು ಮೋಹನ ಹೊಂಚು ಹಾಕಿ ಕಾಯುತ್ತಿದ್ದ. ನಾನು ಬರುತ್ತಲೇ ಹಾರಿ ಬಂದು, ನನ್ನ ಅಂಗೈಯನ್ನು ಹಿಡಿದುಕೊಳ್ಳುತ್ತಿದ್ದ; ಒಮ್ಮೊಮ್ಮೆ ನನ್ನ ಹಿಂಭಾಗಕ್ಕೆ ಚಿವುಟುತ್ತಿದ್ದ. ನಾನು ರೇಗುತ್ತಿದ್ದೆ. ನಾನು ಶಾಲೆಯಿಂದ ಬಂದ ನಂತರ ಸಮಯವಿರುತ್ತಿತ್ತು. ಉಳಿದ ಬಾಡಿಗೆದಾರರು ನೌಕರಿಗೆ ಹೋಗುತ್ತಿದ್ದರು, ಅವರ ಮಕ್ಕಳು ಬೇರೆ ಬೇರೆ ಶಾಲೆಗಳಿಗೆ ಹೋಗುತ್ತಿದ್ದರು. ಅವರು ಶಾಲೆಯಿಂದ ಮರಳಿ ಬರುವ ಸಮಯ ಸಹ ಬೇರೆಬೇರೆಯಾಗಿತ್ತು. ಕೆಲವರು ಟ್ಯೂಶನ್‌ಗೆ ಹೋಗುತ್ತಿದ್ದರು.

ನಾನು ಪ್ರಾರಂಭದಲ್ಲಿ ಅಮ್ಮನಿಗೆ ಮೋಹನನ ಕುಚೇಷ್ಟೆಗಳ ಬಗ್ಗೆ ಹೇಳಲಿಲ್ಲ, ಏಕೆಂದರೆ ಇದರಿಂದ ಅವರ ಯೋಚನೆ ಇನ್ನಷ್ಟು ಹೆಚ್ಚುತ್ತಿತ್ತು. ಆದರೆ ಅದೊಂದು ದಿನ ಮೋಹನ ಹದ್ದು ಮೀರಿದ. ಅಂದು ಶನಿವಾರವಾಗಿತ್ತು. ನನ್ನ ಶಾಲೆ ಶನಿವಾರದಂದು ಬೇಗನೆ ಬಿಡುತ್ತದೆ. ಹೀಗಾಗಿ ನಾನು ಬೇಗನೆ ಮನೆಗೆ ಬಂದಿದ್ದೆ. ನನ್ನ ಸ್ಕರ್ಟ್ ಮತ್ತು ಅಮ್ಮನ ಸೀರೆ ಒಗೆದರೆ, ಅಮ್ಮನಿಗೆ ಭಾನುವಾರ ವಿಶ್ರಾಂತಿ ಸಿಗುವುದೆಂದು ಯೋಚಿಸಿದೆ. ಅಮ್ಮನಿಗೆ ಹೇಗಾದರೂ ಮಾಡಿ ವಿಶ್ರಾಂತಿ ಸಿಗಬೇಕೆಂಬುದು ನನ್ನ ಪ್ರಯತ್ನವಾಗಿರುತ್ತಿತ್ತು. ನನ್ನ ಸಣ್ಣಸಣ್ಣ ಕೆಲಸಗಳು ಸಹ ಅಮ್ಮನಿಗೆ ಖುಷಿ ಕೊಡುತ್ತಿದ್ದವು. ಹೀಗಾಗಿ ಅಂದು ಸಹ ಬಟ್ಟೆ ಸ್ವಚ್ಛಗೊಳಿಸಲು ನಿರ್ಧರಿಸಿದೆ.

ನಾನು ಕೋಣೆಯಿಂದ ಹೊರಗೆ ಬಂದು, ಮೋಹನ ಎಲ್ಲಿದ್ದಾನೆಂದು ಗಮನಿಸಿದೆ. ಆಗ ಅವನು ಮನೆಯಲ್ಲಿಲ್ಲವೆಂದು ಅನ್ನಿಸಿತು. ನಾನು ಧೈರ್ಯವಹಿಸಿ ಅಂಗಳಕ್ಕೆ ಹೋಗಿ ನೋಡಿದೆ. ಮೋಹನ ಸಮೀಪದಲ್ಲಿರುವಂತೆ ಕಾಣ ಬರಲಿಲ್ಲ. ಅವನು ಸಾಮಾನ್ಯವಾಗಿ ಮಧ್ಯಾಹ್ನದ ವೇಳೆಯಲ್ಲಿ 'ವಿವಿಧಭಾರತಿ'ಯ ಹಾಡುಗಳನ್ನು ಕೇಳುತ್ತಿದ್ದ. ಆದರೆ ಆಗ ರೇಡಿಯೊ ಬಂದ್ ಆಗಿತ್ತು. ನಾನು ಬೇಗನೆ ಬಕೆಟಿಗೆ ಬಟ್ಟೆಗಳನ್ನು ಹಾಕಿ, ಸನ್‌ಲೈಟ್ ಸೋಪಿನೊಂದಿಗೆ ಅಂಗಳಕ್ಕೆ ಬಂದೆ. ಬಟ್ಟೆಗಳನ್ನು ಒದ್ದೆ ಮಾಡಿ ನೆಲದ ಮೇಲೆ ಹಾಕಿದೆ. ಬಕೆಟನ್ನು ಖಾಲಿ ಮಾಡಿ ಅದರಲ್ಲಿ ಟ್ಯಾಂಕಿನಿಂದ ನೀರು ತುಂಬಿದೆ. ಬಟ್ಟೆಗಳಿಗೆ ಸಾಬೂನು ತಿಕ್ಕಿ, ಕಲ್ಲಿಗೆ ಬಡಿದೆ. ನಾನು ಆದಷ್ಟು ಬೇಗನೆ ಬಟ್ಟೆಗಳನ್ನು ಸ್ವಚ್ಛಗೊಳಿಸಿ, ಮೋಹನ ಬರುವುದಕ್ಕೆ ಮೊದಲು ಹೋಗಲು ಬಯಸುತ್ತಿದ್ದೆ. ನಾನು ಸ್ವಚ್ಛಗೊಳಿಸಿದ ಬಟ್ಟೆಗಳನ್ನು ಖಾಲಿ ಬಕೆಟಿಗೆ ಹಾಕಿ, ಹೊರಡಲನುವಾದೆ; ಆಗಲೇ ಮೋಹನ ವಕ್ಕರಿಸಿದ. ಅವನು ಕೂಡಲೇ ಬಂದು ಬಕೆಟನ್ನು ಕಸಿದು, ಅದನ್ನು ಕೆಳಗಿಟ್ಟ. ನಂತರ ನನ್ನನ್ನು ಬಾಹುಗಳಲ್ಲಿ ಬಂಧಿಸಿಕೊಂಡು ಚುಂಬಿಸಲಾರಂಭಿಸಿದ. ಭಯದಿಂದಾಗಿ ನನ್ನ ಗಂಟಲು ಒಣಗಿತು. ನಾನು ಬಯಸಿದ್ದಾಗ್ಯೂ ಕಿರುಚದಾದೆ. ಅವನ ಹಿಡಿತದಿಂದ ಪಾರಾಗಲು ಚಡಪಡಿಸಿದೆ. ಅವನು ಒಂದು ಕೈಯಿಂದ ನನ್ನನ್ನು ಹಿಡಿದು, ಇನ್ನೊಂದು ಕೈಯಿಂದ ನನ್ನೆದೆಯನ್ನು ಹಿಚುಕಿದ. ನನ್ನ ಭಯ ಪರಾಕಾಷ್ಠೆಯನ್ನು ತಲುಪಿತು.

'ಅಮ್ಮಾ, ಅಮ್ಮಾ!' ನನ್ನ ಬಾಯಿಯಿಂದ ಗಟ್ಟಿ ಧ್ವನಿ ಹೊರಟಿತು. ನಾನು ಕಿರುಚುತ್ತಲೇ ಮೋಹನ ನನ್ನನ್ನು ಬಿಟ್ಟು, ಕ್ಷಣ ಮಾತ್ರದಲ್ಲಿ ಅಲ್ಲಿಂದ ಕಣ್ಮರೆಯಾದ. ನನ್ನಿಡೀ ಶರೀರ ಭಯದಿಂದ ಕಂಪಿಸುತ್ತಿತ್ತು. ಗಂಟಲು ಒಣಗಿತ್ತು, ಕಾಲುಗಳು ತಡಬಡಿಸುತ್ತಿದ್ದವು. ನಾನು ಹೇಗೋ ಮಾಡಿ, ಸ್ವಚ್ಛಗೊಳಿಸಿದ ಬಟ್ಟೆಗಳೊಂದಿಗೆ ನನ್ನ ಕೋಣೆಗೆ ಓಡಿ ಹೋದೆ. ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿದೆ. ನಂತರ ಹಾಸಿಗೆಯ ಒಂದು ಮೂಲೆಯಲ್ಲಿ ಮುದುಡಿ ಕೂತು, ರೋದಿಸಿದೆ.

ಪ್ರತಿಯೊಂದು ಕಾಲು ಸಪ್ಪಳ ನನ್ನನ್ನು ಹೆದರಿಸುತ್ತಿತ್ತು. ಚಿಲಕ ತಟ್ಟಿದ ಶಬ್ದ ಕೇಳಿ ಮತ್ತಷ್ಟು ಹೆದರಿದೆ.

'ಸುಗಂಧಾ', ಇದು ಅಮ್ಮನ ಧ್ವನಿಯಾಗಿತ್ತು. ನಾನೆದ್ದು ಹೋಗಿ ಬಾಗಿಲು ತೆರೆದೆ. ಅಮ್ಮ ಒಳಗೆ ಬಂದಳು.

'ಓಹ್, ನೀನು ಬಟ್ಟೆಗಳನ್ನೆಲ್ಲಾ ಸ್ವಚ್ಛ ಮಾಡಿದೆಯಾ? ನಾಳೆ ನಾನು ಸ್ವಚ್ಛ ಮಾಡ್ತಿದ್ದೆ. ಇಷ್ಟೊಂದು ಕೆಲಸ ಮಾಡ್ಬೇಡ.' ಅಮ್ಮ ಒಗೆದ, ಒದ್ದೆಯಾದ ಬಟ್ಟೆಗಳನ್ನು ನೋಡುತ್ತಾ ಹೇಳಿದರು.

'ಅರೇ, ಏನಾಯ್ತು? ಆರೋಗ್ಯ ಸರಿಯಿದೆ ತಾನೇ', ಅಮ್ಮನಿಗೆ ನನ್ನ ಮುಖ ನೋಡಿ ಗಾಬರಿಯಾಯಿತು. ಆಗಲೂ ನಾನು ಕಂಪಿಸುತ್ತಿದ್ದೆ.

'ಅಮ್ಮಾ!' ನಾನು ಕಿರುಚಿದೆ.

'ಏನಾಯ್ತು ಮಗಳೇ? ಹೇಳು...' ಅಮ್ಮನಿಗೆ ಗಾಬರಿಯಾಯಿತು.

'ಆ ಮೋಹನ...'

'ಏನ್ ಮಾಡಿದ ಅವ್ನು?' ಅಮ್ಮ ಹೇಗೆ ಪ್ರಶ್ನಿಸಿದಳೆಂದರೆ, ಅವಳಿಗೆ, ಮೋಹನನ ಪ್ರಸಂಗ ಮೊದಲೇ ತಿಳಿದಂತಿತ್ತು. ನಾನು ರೋದಿಸುತ್ತಾ, ಬಿಕ್ಕಳಿಸುತ್ತಾ ಎಲ್ಲಾ ಘಟನೆಗಳನ್ನು ಹೇಳಿದೆ.

'ಅಳ್ಬೇಡ ಸುಗಂಧಾ, ಅಳ್ಬೇಡ. ಈ ಜಗತ್ತು ತುಂಬಾ ಕ್ರೂರ. ಇದು ಒಂಟಿ ಹೆಂಗಸರನ್ನು ಅಥವಾ ಒಂಟಿ ಹುಡುಗಿಯರನ್ನು ನೆಮ್ಮದಿಯಿಂದ ಬದುಕಲು ಬಿಡಲ್ಲ. ಆದರೆ ನೀನು ಹೆದರ ಬೇಡ, ಧೈರ್ಯವಾಗಿರು. ನಾವು ಬೇಗನೆ ಈ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೋಗೋಣ. ಅಲ್ಲಿಯವರೆಗೆ ಮೋಹನನ ಬಗ್ಗೆ ಎಚ್ಚರಿಕೆಯಿಂದಿರು, ಅಂಗಳಕ್ಕೆ ಹೋಗಲೇ ಬೇಡ. ತಿಳೀತಾ!'

ನಾನು ಆಗಲೆಂದು ತಲೆಯಾಡಿಸಿದೆ.

'ನಾವಿಲ್ಲಿ ಹೇಗೋ ಮಾಡಿ ಕೆಲವು ದಿನಗಳು ಕಳೆಯಬೇಕಾಗುವುದು, ಬೇರೆ ಮನೆ ಸಿಗುತ್ತಲೇ ಎಲ್ಲವೂ ಸರಿಯಾಗುತ್ತದೆ', ಅಮ್ಮ ನನಗೆ ತಿಳಿಯಪಡಿಸಿದ್ದರು. 'ಒಂದು ವೇಳೆ ಅವನು ಮತ್ತೂ ನಿನಗೆ ಕಾಡಿಸಿದರೆ, ಗಟ್ಟಿಯಾಗಿ ಗದರಿಸು, ಒಂದು ವೇಳೆ ಮತ್ತೆ ನನ್ನ ಸುದ್ದಿಗೆ ಬಂದರೆ ನಿನ್ನ ತಂದೆ ತಾಯಿಗೆ ದೂರು ಕೊಡ್ತೀನಿ' ಅಂತ ಹೇಳು.'

ಅಮ್ಮ ನನಗೆ ಧೈರ್ಯದಿಂದ ಎಲ್ಲವನ್ನು ಎದುರಿಸುವ ಪಾಠವನ್ನು ಕಲಿಸಿದ್ದರು, ಇದನ್ನು ನಾನು ನೆನಪಿಟ್ಟುಕೊಂಡಿದ್ದೇನೆ. ಈ ಪಾಠ ನನ್ನ ಜೀವನ ಪರ್ಯಂತದ ಕೆಲಸಗಳಿಗೆ ಸಹಕಾರಿಯಾಗುವಂತಿತ್ತು. ಈ ಘಟನೆಯ ನಂತರವೂ ನನಗೆ ನನ್ನ ಶರೀರದ ವಿಜ್ಞಾನ ತಿಳಿಯಲಿಲ್ಲ. ಅದುವರೆಗೆ ನನಗೆ 'ತಿಂಗಳು ತಿಂಗಳು' ಆಗುವುದು ಸಹ ಆರಂಭವಾಗಿರಲಿಲ್ಲ. ನಾನಿದ್ದ ಕಾಲದಲ್ಲಿ ಟಿ.ವಿ. ಸಹಜವಾಗಿ ಲಭ್ಯವಾಗುತ್ತಿರಲಿಲ್ಲ. ಭೋಪಾಲಿನಲ್ಲಿ ಇಂಟರ್‌ನೆಟ್‌ನ ಸೌಲಭ್ಯವಿರಲಿಲ್ಲ. ನನ್ನ ಹಾರ್ಮೋನ್ಸ್ ಪ್ರಾಕೃತಿಕ ವೇಗದಲ್ಲಿ ಬದಲಾಗುತ್ತಿದ್ದವು. ಅಂದರೆ ನನಗೆ ಹೆಣ್ಣುಗಂಡಿನ ದೈಹಿಕ ಸಂಬಂಧಗಳ ಗಣಿತ ಅದುವರೆಗೆ ಸರಿಯಾಗಿ ಅರಿವಿರಲಿಲ್ಲ.

'ಸುಗಂಧಾ! ನೀನು ನನ್ನೊಂದಿಗಿರಲು ಇಷ್ಟಪಡ್ತೀಯೋ, ಅಪ್ಪನ ಜೊತೆಗಿರಲು ಇಷ್ಟಪಡ್ತೀಯೋ?' ಅದೊಂದು ದಿನ ಅಮ್ಮ ನನ್ನನ್ನು ಕೇಳಿದರು. ಆಗ ಅವರು ತುಂಬಾ ಗಾಬರಿಗೊಂಡಿದ್ದರು. ಈ ಪ್ರಶ್ನೆಯನ್ನು ಅಮ್ಮ ನನ್ನ ಜೀವಮಾನದಲ್ಲಿ ಎರಡನೆಯ ಬಾರಿಗೆ ಕೇಳಿದ್ದರು. ಇದೇ ಪ್ರಶ್ನೆಯನ್ನು ಅವರು ಅಪ್ಪನ ಮನೆಯನ್ನು ತ್ಯಜಿಸುವಾಗ ನನ್ನಲ್ಲಿ ಕೇಳಿದ್ದರು.

(ಸಶೇಷ)